**Akashvani : Bangalore**
**National Bulletin In Kannada**
**11.10.2024 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. **ಆಸಿಯಾನ್ ಶೃಂಗಸಭೆ ಸಂಪನ್ನ; ರಕ್ಷಣಾ ಸಹಕಾರ, ಕಸ್ಟಮ್ಸ್ ಸೇರಿದಂತೆ ಆರು ಒಪ್ಪಂದಗಳಿಗೆ ಭಾರತ-ಲಾವೋಸ್ ಸಹಿ**

೨. **೨೦೨೪ರ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಜಪಾನಿನ 'ನಿಹಾನ್ ಹಿಂಡಾಂಕ್ಯೊ' ಭಾಜನ**

೩. **ದೇಶದೆಲ್ಲೆಡೆ ಆಯುಧ ಪೂಜೆ ಸಂಭ್ರಮ; ರಾಷ್ಟ್ರಪತಿಗಳಿಂದ ದೇಶದ ಜನತೆಗೆ ಶುಭಾಶಯ**

೪. **ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್; ಆಸ್ಟ್ರೇಲಿಯಾ - ಪಾಕಿಸ್ತಾನ ಮುಖಾಮುಖಿ**

**<><*<><>*><>**

ಭಾರತ ಮತ್ತು ಲಾವೋಸ್ ಇಂದು ರಕ್ಷಣಾ ಸಹಕಾರ, ಕಸ್ಟಮ್ಸ್, ಪರಂಪರೆಯ ಸಂರಕ್ಷಣೆ ಸೇರಿದಂತೆ ಈ ಕ್ಷೇತ್ರಗಳಲ್ಲಿ ಆರು ತಿಳುವಳಿಕಾ ಒಪ್ಪಂದಗಳಿಗೆ ಸಹಿ ಹಾಕಿವೆ. ಭಾರತ-ಯುಎನ್ ಅಭಿವೃದ್ಧಿ ಪಾಲುದಾರಿಕೆ ನಿಧಿಯ ಮೂಲಕ ಆಹಾರ ಬಲವರ್ಧನೆಯೊಂದಿಗೆ ಲಾವೋಸ್‌ನಲ್ಲಿ ಪೌಷ್ಟಿಕಾಂಶದ ಭದ್ರತೆಯನ್ನು ಸುಧಾರಿಸುವ ಯೋಜನೆಗೆ ಒಂದು ಮಿಲಿಯನ್ ಅಮೆರಿಕನ್ ಡಾಲರ್ ಆರ್ಥಿಕ ನೆರವು ನೀಡಲು ಭಾರತ ನಿರ್ಧರಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಲಾವೋಸ್ ಅಧ್ಯಕ್ಷ ಸೋನೆಕ್ಸೆ ಸಿಫಾಂಡೋನ್ ಅವರ ಸಮ್ಮುಖದಲ್ಲಿ ಪರಸ್ಪರ ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಲಾವೋಸ್ ಪ್ರವಾಸದ ಎರಡನೇ ದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ಅವರು ಲಾವೋ ಅಧ್ಯಕ್ಷರಾದ ಪಿಡಿಆರ್ ಥೋಂಗ್ಲೌನ್ ಸಿಸೌಲಿತ್ ಅವರನ್ನು ಭೇಟಿಯಾದರು. ಆಸಿಯಾನ್ ಶೃಂಗಸಭೆ ಮತ್ತು ಪೂರ್ವ ಏಷ್ಯಾ ಶೃಂಗಸಭೆಯನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕಾಗಿ ಅಧ್ಯಕ್ಷ ಸಿಸೌಲಿತ್ ಅವರನ್ನು ಪ್ರಧಾನಿ ಅಭಿನಂದಿಸಿದರು. ಸಭೆಯಲ್ಲಿ, ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಚರ್ಚಿಸಿದರು ಮತ್ತು ನಿಕಟ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಈ ನಡುವೆ ಟೈಫೂನ್ ಯಾಗಿ ಯಿಂದ ಉಂಟಾದ ಪ್ರವಾಹದ ಹಿನ್ನೆಲೆಯಲ್ಲಿ ಲಾವೊ ಪಿಡಿಆರ್‌ಗೆ ಭಾರತದ ಮಾನವೀಯ ಸಹಾಯಕ್ಕಾಗಿ ಸಿಸೌಲಿತ್ ಅವರು ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು. ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಲಾವೊ ಪಿಡಿಆರ್ ಪ್ರಧಾನಿ ಸೋನೆಕ್ಸೆ ಸಿಫಾಂಡೋನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಉಭಯ ನಾಯಕರು ದ್ವಿಪಕ್ಷೀಯ ಸಹಕಾರದ ವಿವಿಧ ಕ್ಷೇತ್ರಗಳಾದ ಅಭಿವೃದ್ಧಿ ಪಾಲುದಾರಿಕೆ, ವಿಪತ್ತು ನಿರ್ವಹಣೆ, ನವೀಕರಿಸಬಹುದಾದ ಇಂಧನ, ಪರಂಪರೆಯ ಮರುಸ್ಥಾಪನೆ, ಆರ್ಥಿಕ ಸಂಬಂಧಗಳು, ರಕ್ಷಣಾ ಸಹಯೋಗ ಮತ್ತು ಜನರ ನಡುವಿನ ಸಂಬಂಧಗಳ ಕುರಿತು ಚರ್ಚಿಸಿದರು. ಇದಕ್ಕೂ ಮುನ್ನ ೧೯ನೇ ಪೂರ್ವ ಏಷ್ಯ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಇಂಡೋ-ಫೆಸಿಫಿಕ್‌ನ ಇಡೀ ಪ್ರಾಂತ್ಯದಲ್ಲಿ ಶಾಂತಿ ಮತ್ತು ಪ್ರಗತಿಗೆ ಮುಕ್ತ, ಒಳಗೊಳ್ಳುವಿಕೆ, ಸಮೃದ್ಧತೆ ಮತ್ತು ನಿಯಮಗಳ ಆಧರಿತ ಕ್ರಮಗಳ ಅಗತ್ಯವಿದೆ. ಅಲ್ಲದೆ ದಕ್ಷಿಣ ಚೀನಾ ಸಮುದ್ರದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆಯ ಅಗತ್ಯವಿದೆ. ವಿಶ್ವದ ವಿವಿಧೆಡೆ ನಡೆಯುತ್ತಿರುವ ಸಂಘರ್ಷಗಳಿಂದ ಜಾಗತಿಕ ದಕ್ಷಿಣದ ದೇಶಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಹೇಳಿದರು. ಸೈಬರ್, ಸಾಗರ ವಲಯ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಸಹಕಾರ ಬಲಗೊಳಿಸುವ ಅಗತ್ಯವಿದೆ. ನೌಕಾಯಾನ ಮತ್ತು ವಾಯುಯಾನದಲ್ಲಿ ಸ್ವಾತಂತ್ರ ಅಗತ್ಯವಾಗಿದೆ ಎಂದರು. ವಿಶ್ವದಲ್ಲಿ ಶಾಂತಿ ಮತ್ತು ಸ್ಥಿರತೆ ನೆಲೆಸುವುದನ್ನು ಎಲ್ಲರೂ ಬಯಸುತ್ತಾರೆ. ಇದು ಯುದ್ಧದ ಕಾಲವಲ್ಲ. ಯುದ್ಧ ಭೂಮಿಯಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ ಎಂದು ಪ್ರಧಾನಿ ಮೋದಿ ಹೇಳಿದರು. ಸಭೆಗಳ ನಂತರ ಪ್ರಧಾನಿ ನರೇಂದ್ರ ಮೋದಿ ಸ್ವದೇಶಕ್ಕೆ ವಾಪಸಾದರು.

**<><*<><>*><>**

ಹಿರೋಷಿಮಾ ಮತ್ತು ನಾಗಾಸಾಕಿ ಮೇಲಿನ ಪರಮಾಣು ಬಾಂಬ್ ದಾಳಿಯಲ್ಲಿ ಬದುಕುಳಿದ ಜಪಾನಿನ ಗುಂಪು ನಿಹಾನ್ ಹಿಡಾಂಕ್ಯೊ, ೨೦೨೪ ರ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನವಾಗಿದೆ. ಹಿಬಾಕುಶಾ ಎಂದೂ ಕರೆಯಲ್ಪಡುವ ಈ ಗುಂಪು, ಪರಮಾಣು ಶಸ್ತ್ರಾಸ್ತ್ರಗಳನ್ನು ಮತ್ತೆ ಬಳಸಬಾರದು. ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತ ಜಗತ್ತನ್ನು ಸಾಧಿಸಲು, ಅದರ ದಣಿವರಿಯದ ಪ್ರಯತ್ನಗಳಿಗಾಗಿ ನೊಬೆಲ್ ಶಾಂತಿ ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

<><*<><>*><>

ಶರನ್ನವರಾತ್ರಿಯ ೯ನೇ ದಿನವಾದ ಇಂದು, ಮಹಾನವಮಿ, ಅಶ್ವಯುಜ ಮಾಸದ ನವರಾತ್ರಿಯಂದು, ದೇಶಾದ್ಯಂತ ಸರಸ್ವತಿ ಪೂಜೆ, ಆಯುಧ ಪೂಜೆ ನೆರವೇರಿಸಲಾಯಿತು. ನಿತ್ಯ ಉಪಯೋಗಿಸುವ ಯಂತ್ರ, ಸಲಕರಣೆ, ಆಯುಧಗಳನ್ನು ಪೂಜಿಸುವ ಪರಿಪಾಠವಿದೆ. ದೇವಿ ದುರ್ಗೆಯ ೮ ಭುಜಗಳು, ಅಷ್ಟ ಶಕ್ತಿಗಳ ಪ್ರತೀಕವಾಗಿದೆ.  ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದು ದುರ್ಗಾ ಪೂಜೆಯ ಸಂದರ್ಭದಲ್ಲಿ ದೇಶದ ಎಲ್ಲಾ ನಾಗರಿಕರಿಗೆ ಶುಭಾಶಯಗಳನ್ನು ಕೋರಿದ್ದಾರೆ. ಸಾಮಾಜಿಕ ಮಾಧ್ಯಮದ ಸಂದೇಶದಲ್ಲಿ ಅವರು, ದುರ್ಗಾಪೂಜೆಯನ್ನು ದುಷ್ಟ ಶಕ್ತಿಯ ಎದುರು ಒಳ್ಳೆಯತನದ ವಿಜಯವೆಂದು ಆಚರಿಸಲಾಗುತ್ತದೆ. ದುರ್ಗಾ ಮಾತೆಯನ್ನು ಶಕ್ತಿಯ ಸಂಕೇತವೆಂದು ಪರಿಗಣಿಸಲಾಗುತ್ತದೆ. ಈ ಹಬ್ಬ, ದುರ್ಗಾ ದೇವಿಗೆ ಸಂಪೂರ್ಣವಾಗಿ ಸಮರ್ಪಿಸುವ ಮತ್ತು ಎಲ್ಲಾ ಧರ್ಮಗಳ ನಡುವೆ ಏಕತೆ ಮತ್ತು ಸೌಹಾರ್ದತೆಯನ್ನು ಉತ್ತೇಜಿಸುವ ಸಂದರ್ಭವಾಗಿದೆ ಎಂದು ಅವರು ಹೇಳಿದರು. ನ್ಯಾಯಯುತ, ಸಂವೇದನಾಶೀಲ ಮತ್ತು ಸಮ ಸಮಾಜ ನಿರ್ಮಾಣಕ್ಕೆ ದುರ್ಗಾ ಮಾತೆಯ ಶಕ್ತಿ, ಸಂಕಲ್ಪ ಮತ್ತು ಧೈರ್ಯವನ್ನು ನೀಡಲಿ ಎಂದು ರಾಷ್ಟ್ರಪತಿ ಹಾರೈಸಿದ್ದಾರೆ.

<><*<><>*><>

ಟಾಟಾ ಗ್ರೂಪ್‌ನ ಅಂಗವಾದ ಟಾಟಾ ಟ್ರಸ್ಟ್‌ನ ಅಧ್ಯಕ್ಷರಾಗಿ ನೋಯೆಲ್ ಟಾಟಾ ಅವರನ್ನು ಇಂದು ಸರ್ವಾನುಮತದಿಂದ ನೇಮಿಸಲಾಗಿದೆ. ರತನ್ ಟಾಟಾ ಅವರು, ನಿಧನರಾದ ಹಿನ್ನಲೆಯಲ್ಲಿ ಇಂದು ನಡೆದ ಮಂಡಳಿಯ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಈ ಮೂಲಕ ರತನ್ ಟಾಟಾ ಅವರ ನಂತರ ಅವರ ಉತ್ತರಾಧಿಕಾರಿಯಾಗಿದ್ದಾರೆ. ರತನ್ ಟಾಟಾ ಅವರ ಮಲ ಸಹೋದರರಾಗಿರುವ ನೋಯಲ್ ಟಾಟಾ, ಟಾಟಾ ಸ್ಟೀಲ್ಸ್, ವೋಲ್ಟಾಸ್ ಸೇರಿದಂತೆ ಟಾಟಾ ಸಮೂಹದ ಕಂಪನಿಗಳ ಮಂಡಳಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

<><*<><>*><>

ಸಿಕ್ಕಿಂನ ರಾಜಧಾನಿ ಗ್ಯಾಂಗ್ಟಾಕ್‌ನಲ್ಲಿ ಇಂದಿನಿಂದ ಎರಡು ದಿನಗಳ ಸೇನಾ ಕಮಾಂಡರ್‌ಗಳ ಸಮ್ಮೇಳನ ನಡೆಯುತ್ತಿದೆ. ಸಮ್ಮೇಳನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದ್ದಾರೆ. ಗ್ಯಾಂಗ್‌ಟಾಕ್‌ನಲ್ಲಿ ಮೊದಲ ಬಾರಿಗೆ ಸೇನಾ ಕಮಾಂಡರ್‌ಗಳ ಸಮ್ಮೇಳನ ನಡೆಯುತ್ತಿದೆ. ಈ ಸಮ್ಮೇಳನದಲ್ಲಿ ದೇಶದ ರಕ್ಷಣಾ ವಲಯದ ಮುಂದಿನ ಕಾರ್ಯತಂತ್ರದ ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಯಲಿದ್ದು, ಸೇನಾ ಮುಖ್ಯಸ್ಥರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಪ್ರಮುಖವಾಗಿ ರಕ್ಷಣಾ ಸನ್ನದ್ಧತೆ ಮತ್ತು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಭದ್ರತಾ ವಲಯದ ಕಾರ್ಯಾಚರಣೆಯ ಸಿದ್ಧತೆಯನ್ನು ಹೆಚ್ಚಿಸುವ ಗುರಿಯನ್ನು ಈ ಸಮ್ಮೇಳನ ಹೊಂದಿದೆ. ರಕ್ಷಣಾ ವಲಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಭಾರತೀಯ ಸೇನೆಯು ಸಮಕಾಲೀನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಬದ್ಧತೆ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ. ಸಿಕ್ಕಿಂ ಭೇಟಿ ವೇಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಸೇನೆಯ ರಸ್ತೆ ಅಭಿವೃದ್ಧಿ ಯೋಜನೆಗಳು ಮತ್ತು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಗ್ಲೇಶಿಯಲ್ ಲೇಕ್ ಪ್ರವಾಹದಲ್ಲಿ ಪ್ರಾಣ ಕಳೆದುಕೊಂಡ ೨೨ ಸೈನಿಕರಿಗೆ ಸಮರ್ಪಿತವಾದ ಪ್ರೇರಣಾ ಸ್ಥಳವನ್ನು ಉದ್ಘಾಟಿಸಲಿದ್ದಾರೆ.

<><*<><>*><>

ಲೆಬನಾನ್‌ನಲ್ಲಿನ ಪರಿಸ್ಥಿತಿಯ ಬಗ್ಗೆ ಭಾರತ ಕಳವಳ ವ್ಯಕ್ತಪಡಿಸಿದೆ. ಈ ಕುರಿತು ಹೇಳಿಕೆ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, ಲೆಬನಾನ್‌ನಲ್ಲಿನ ಪರಿಸ್ಥಿತಿಯನ್ನು ನಿಕಟವಾಗಿ ಮೇಲ್ವಿಚಾರಣೆ ನಡೆಸುವುದನ್ನು ಭಾರತ ಮುಂದುವರಿಸಿದೆ. ನೀಲಿ ರೇಖೆಯ ಉದ್ದಕ್ಕೂ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಭಾರತ ಕಳವಳ ವ್ಯಕ್ತಪಡಿಸಿದೆ. ವಿಶ್ವಸಂಸ್ಥೆಯ ನಿಯಮಗಳನ್ನು ಎಲ್ಲರೂ ಗೌರವಿಸಬೇಕು. ವಿಶ್ವಸಂಸ್ಥೆ ಶಾಂತಿ ಪಾಲಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಭಾರತ ಒತ್ತಾಯಿಸಿದೆ.

<><*<><>*><>

ಭಾರತೀಯ ನೌಕಾಪಡೆಯ ೩ನೇ ಆವೃತ್ತಿಯ ನೇವಲ್ ಇನ್ನೋವೇಶನ್ ಮತ್ತು ಇಂಡಿಜೆನೈಸೇಶನ್ ಸಮಾವೇಶ; 'ಸ್ವಾವಲಂಬನ್-೨೦೨೪' ಇದೇ ೨೮ ಮತ್ತು ೨೯ ರಂದು ನವದೆಹಲಿಯಲ್ಲಿ ನಡೆಯಲಿದೆ. ಸಮಾವೇಶವು ನೌಕಾಪಡೆಗೆ ಸಂಬಂಧಿಸಿದಂತೆ ನಾವೀನ್ಯತೆ ಮತ್ತು ಸ್ವದೇಶೀಕರಣದ ಪ್ರಯತ್ನಕ್ಕೆ ಹೊಸ ಮತ್ತು ಗಣನೀಯ ಪ್ರಚೋದನೆಯನ್ನು ನೀಡುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ವಾಯು ಮತ್ತು ಮೇಲ್ಮೈ ಕಣ್ಗಾವಲು, ಮೇಲ್ಮೈಯಲ್ಲಿ ಸ್ವಾಯತ್ತ ವ್ಯವಸ್ಥೆಗಳು, ವೈಮಾನಿಕ ಮತ್ತು ಕಡಲ ಕ್ಷೇತ್ರ ಹಾಗೂ ಕ್ವಾಂಟಮ್ ತಂತ್ರಜ್ಞಾನಗಳಂತಹ ಸ್ಥಾಪಿತ ತಂತ್ರಜ್ಞಾನಗಳ ಉತ್ಪನ್ನಗಳನ್ನು ಸಮಾವೇಶದಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><*<><>*><>

೨೦೧೬-೧೭ ರಿಂದ ೨೦೨೧-೨೨ ರವರೆಗೆ ದೇಶದ ಗ್ರಾಮೀಣ ಕುಟುಂಬಗಳ ಸರಾಸರಿ ಮಾಸಿಕ ಆದಾಯ ೫೭ ಪ್ರತಿಶತದಷ್ಟು ಹೆಚ್ಚಾಗಿದೆ ಎಂದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕ್- ನಬಾರ್ಡ್‌ನ ವರದಿ ತಿಳಿಸಿದೆ. ಎರಡನೇ ಅಖಿಲ ಭಾರತ ಗ್ರಾಮೀಣ ಹಣಕಾಸು ಸೇರ್ಪಡೆ ಸಮೀಕ್ಷೆಯ ಪ್ರಕಾರ, ಸರಾಸರಿ ಮಾಸಿಕ ಆದಾಯ ೨೦೧೬-೧೭ರಲ್ಲಿ ೮ ಸಾವಿರದ ೫೯ ರೂಪಾಯಿಗಳಿಂದ ೨೦೨೧-೨೨ರಲ್ಲಿ ೧೨ ಸಾವಿರದ ೬೯೮ ರೂಪಾಯಿಗಳಿಗೆ ಏರಿಕೆಯಾಗಿದೆ. ಕುಟುಂಬಗಳ ಸರಾಸರಿ ಮಾಸಿಕ ವೆಚ್ಚವೂ ಸಹ ೬ ಸಾವಿರದ ೬೦೦ ರೂಪಾಯಿಗಳಿಂದ ೧೧ ಸಾವಿರದ ೨೦೦ ರೂಪಾಯಿಗಳಿಗೆ ಏರಿಕೆಯಾಗಿದೆ. ಸರಾಸರಿ ಮನೆಯ ಆರ್ಥಿಕ ಉಳಿತಾಯದಲ್ಲೂ ಏರಿಕೆಯಾಗಿದ್ದು, ೨೦೧೬-೧೭ರಲ್ಲಿ ೫೦.೬ ಪ್ರತಿಶತ ದಷ್ಟು ಕುಟುಂಬಗಳು ಉಳಿತಾಯ ದಾಖಲಿಸಿದ್ದವು, ಈ ಪ್ರಮಾಣ ೨೦೨೧-೨೨ರಲ್ಲಿ ಸುಮಾರು ೬೬ ಪ್ರತಿಶತ ಕ್ಕೆ ಏರಿಕೆಯಾಗಿದೆ. ನಬಾರ್ಡ್‌ನ ಸಮೀಕ್ಷೆಯು ಗ್ರಾಮೀಣ ರೈತರಲ್ಲಿ ಆರ್ಥಿಕ ಒಳಗೊಳ್ಳುವಿಕೆಯನ್ನು ವಿಸ್ತರಿಸುವಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್‌ನ ಪಾತ್ರವನ್ನು ಎತ್ತಿ ತೋರಿಸಿದೆ. ಪಿಂಚಣಿ ವ್ಯಾಪ್ತಿಯು ಸುಧಾರಿಸಿದ್ದು, ಸುಮಾರು ೧೯ ಪ್ರತಿಶತದಿಂದ ೨೩.೫ ಪ್ರತಿಶತದಷ್ಟು ಕುಟುಂಬಗಳಿಗೆ ಏರಿದೆ. ಏತನ್ಮಧ್ಯೆ, ಬಾಕಿ ಇರುವ ಸಾಲವನ್ನು ಹೊಂದಿರುವ ಕುಟುಂಬಗಳ ಪ್ರಮಾಣ ೨೦೧೬-೧೭ ರಲ್ಲಿ ಸುಮಾರು ೪೭ ಪ್ರತಿಶತದಿಂದ ೨೦೨೧-೨೨ ರಲ್ಲಿ ೫೨ ಪ್ರತಿಶತಕ್ಕೆ ಏರಿಕೆಯಾಗಿದೆ ಎಂದು ನಬಾರ್ಡ್ ವರದಿ ತಿಳಿಸಿದೆ.

<><*<><>*><>

ಇಂದು ಲೋಕನಾಯಕ ಜೈಪ್ರಕಾಶ್ ನಾರಾಯಣ್ ಅವರ ಜನ್ಮದಿನ. ಈ ಹಿನ್ನೆಲೆಯಲ್ಲಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗೌರವ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಸಂದೇಶದಲ್ಲಿ ಅವರು, ದೇಶ ಮತ್ತು ಸಮಾಜಕ್ಕೆ ಜೈಪ್ರಕಾಶ್ ನಾರಾಯಣರ ನೀಡದಂತಹ ಕೊಡುಗೆಗಳು ಅನನ್ಯ. ಜೈಪ್ರಕಾಶ್ ನಾರಾಯಣ್ ಅವರ ವ್ಯಕ್ತಿತ್ವ ಮತ್ತು ಆದರ್ಶಗಳು ಪ್ರತಿ ಪೀಳಿಗೆಗೆ ಎಂದಿಗೂ ಸ್ಫೂರ್ತಿದಾಯಕ ಎಂದು ತಿಳಿಸಿದ್ದಾರೆ.

<><*<><>*><>

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡ ಬೌಲಿಂಗ್ ಆಯ್ಕೆ ಮಾಡಿಕೊಂಡಿದೆ. a

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**